## ಕೇವಲ ಕಥೆಯಲ್ಲ, ವ್ಯಥೆ

‘ಕುಶಲೆ ಹಿತ್ತಲು’ (ಡಿ. 04, ಫಾಲ್ಗುಣ ಗೌಡ ಅಚವೆ) ಕಥೆ ಕಣ್ಣೀರು ತರಿಸಿತು. ನಮ್ಮ ಉತ್ತರ ಕನ್ನಡದ ಬೆಟ್ಟ, ಗುಡ್ಡಗಾಡು ಪ್ರದೇಶದಲ್ಲಿ ವಾಸಿಸುವವರ, ಪುಟ್ಟ ಗುಡಿಸಲು ಮಾಡಿಕೊಂಡು ಅರಣ್ಯ ಪ್ರದೇಶಗಳಲ್ಲಿ ವಾಸಿಸುವ ಬಡಜನರ ಸಾಮಾಜಿಕ ಸ್ಥಿತಿಗೆ ಕನ್ನಡಿ ಹಿಡಿಯುವಂತೆ ಇದೆ. ಇದು ಕೇವಲ ಕಥೆಯಲ್ಲ, ವ್ಯಥೆ; ವಾಸ್ತವಿಕ ಬದುಕು; ಇವರ ಗೋಳಾಟ ಯಾರೂ ಕೇಳುವವರಿಲ್ಲ. ಈ ಬಗ್ಗೆ ಸಮಾಜ, ಸರ್ಕಾರದ ಗಮನ ಸೆಳೆಯಬೇಕು.

–ವಿಶ್ವೇಶ್ವರ ಗಾಯತ್ರಿ, ಬೆಂಗಳೂರು

## ಭಾವನಾತ್ಮಕ ತಿರುವು



ಮನುಷ್ಯ ಅದೆಷ್ಟು ಭಾವಜೀವಿ ಎಂಬುದನ್ನು ಬಿಚ್ಚಿಡುವ ಸುಂದರ ಕಥೆ. ತನಗೆ ಪ್ರಿಯವೆನಿಸಿದ ವ್ಯಕ್ತಿ, ವಸ್ತು, ಪರಿಸರದೊಂದಿಗೆ ಅವಿನಾಭಾವ ಸಂಬಂಧ ಬೆಳೆಸುವುದು ಮಾನವ ಸಹಜಗುಣ. ತನ್ನ ಮನೆ ಹಿತ್ತಲ ಅಂಗಳ, ಅಲ್ಲಿ ಬೆಳೆದ ಹೂ ತರಕಾರಿ ಗಿಡಗಳು, ಬಸಲೆ ಚಪ್ಪರ ಇವೆಲ್ಲದರಲ್ಲಿ ತನ್ನ ಜೀವವನ್ನೇ ಇರಿಸಿದ್ದು ಕುಶಲೆ. ಕುಶಲೆ ಸಣಕೂಸ ಇಬ್ಬರೂ ತುಂಡು ಭೂಮಿಗಾಗಿ ಕನಸು ಕಾಣುತ್ತಿದ್ದರೆ ವಿಧಿ ಬೇರೇನೇ ಬಯಸಿತ್ತು. ಅರಣ್ಯ ಇಲಾಖೆಯ ನೋಟಿಸ್ ಬಂದಾಗಲಂತೂ ಇದ್ದ ಹಿತ್ತಲನ್ನೇ ಬಿಟ್ಟು ಹೋಗಬೇಕಾಗಿ ಬರಬಹುದು ಎಂಬ ಯೋಚನೆಯೇ ಕುಶಲೆ ಜೀವಕ್ಕೆ ಕುತ್ತು ತಂದಿದ್ದು ಭಾವನಾತ್ಮಕ ತಿರುವು.

–ದಯಾನಂದ ಶೆಟ್ಟಿ, ಕಾರ್ಕಳ

## ಸಮಾಜಕ್ಕೆ ಮಾದರಿ

‘ಕಾಡನ್ನು ಕಾಪಾಡುವ ಸೋನಲ್’ (ಡಿ. 04, ಕೆ.ಎಸ್. ಗಿರೀಶ್) ‘ಸೆಲೆಬ್ರಿಟಿ’ ಅಂಕಣದಲ್ಲಿ ದೂರದ ಉತ್ತರ ಪ್ರದೇಶದ ಲಖನೌದಿಂದ ಬಂದು ಕನ್ನಡ ಕಲಿತು ‘ನಾವು ಯಾವ ನೆಲದಲ್ಲಿ ಇರುತ್ತೇವೋ ಆ ನೆಲದ ಭಾಷೆ, ಸಂಸ್ಕೃತಿಗೆ ಬದ್ಧರಾಗಿರಬೇಕು’ ಎಂದು ಹೇಳಿದ ದಕ್ಷ ಅಧಿಕಾರಿಯ ಬಗ್ಗೆ ಹೆಮ್ಮೆಯೆನಿಸಿತು.

ಶಿಸ್ತು, ಸಂಯಮ ಮೈಗೂಡಿಸಿಕೊಂಡು ಕರ್ನಾಟಕದ ಕೊಡಗು ಜಿಲ್ಲೆಯಲ್ಲಿ ಅರಣ್ಯಾಧಿಕಾರಿಯಾಗಿರುವ ಸೋನಲ್‌ರವರ ಕಾರ್ಯವೈಖರಿ ಸಮಾಜಕ್ಕೆ ಮಾದರಿ.

–ಕೆ.ಎಂ. ಕೊಟ್ರಸ್ವಾಮಿ, ಸಂಡೂರು

## ಉದ್ಯೋಗ ಸೃಷ್ಟಿ ಪ್ರಯತ್ನ ನಡೆಯಲಿ


‘ಶಿಕ್ಷಣವೋ? ಉದ್ಯೋಗವೋ?’ (ಡಿ. 04, ಗುರು ಪಿ.ಎಸ್.) ಮುಖಪುಟ ಲೇಖನ ಸಕಾಲಿಕ ಹಾಗೂ ಸ್ವಾಗತಾರ್ಹ. ಶಿಕ್ಷಣ ನಮ್ಮಲ್ಲಿ ವಿವೇಕ, ವಿವೇಚನೆ, ವಿಮೋಚನೆ, ಜಗತ್ತನ್ನು ಅರಿಯುವ ಮತ್ತು ಸ್ವತಂತ್ರವಾಗಿ ಬದುಕುವ ಶಕ್ತಿಯನ್ನು ಕೊಡುತ್ತದೆ. ಸರ್ಕಾರ ಜನರಿಗೆ ಕೌಶಲಾಧಾರಿತ ಶಿಕ್ಷಣ ನೀಡಿ ಉದ್ಯೋಗ ಸೃಷ್ಟಿಯ ಪ್ರಯತ್ನಗಳನ್ನು ಮಾಡಬೇಕು. ಉದ್ಯೋಗ ಪಡೆಯಲು ಕೌಶಲಾಧಾರಿತ ಶಿಕ್ಷಣ ಅತ್ಯಂತ ಮಹತ್ವದ ಆಯುಧ. ಉದ್ಯೋಗ ದುಡಿಯುವವರ ಜೀವನಕ್ಕೆ ಭದ್ರತೆ, ಸ್ಥಿರತೆ ತಂದುಕೊಡುತ್ತದೆ. ಜೀವನ ಮಟ್ಟ ಸುಧಾರಿಸುತ್ತದೆ. ಸ್ವತಂತ್ರವಾಗಿ, ಸ್ವಾವಲಂಬಿಗಳಾಗಿ ಬದುಕಲು ಸಾಧ್ಯವಾಗುತ್ತದೆ. ಶಿಕ್ಷಣವಿಲ್ಲದೆಯೂ ಉದ್ಯಮಗಳನ್ನು ಕಟ್ಟಿ ಯಶಸ್ವಿಯಾಗಿದ್ದಾರೆ. ಇಂಥವರು ವಿಶಿಷ್ಟವಾದ ಸೃಜನಶೀಲವಾದ ಬುದ್ಧಿವಂತಿಕೆ, ಸೌಲಭ್ಯ ಮತ್ತು ಪ್ರೋತ್ಸಾಹದ ವಾತಾವರಣದಿಂದ ಬೆಳೆದವರಾಗಿರುತ್ತಾರೆ.

–ಟಿ. ಶಿವಮೂರ್ತಿ ಉಪ್ಪಾರ, ಚಾಮರಾಜನಗರ

## ವಿದ್ಯೆಯೇ ಸಂಪತ್ತು

ಲೇಖನ ಚೆನ್ನಾಗಿದೆ. ಅಲ್ಪ ಸ್ವಲ್ಪ ಓದಿಕೊಂಡು ಅಪಾರ ಹಣ ಸಂಗ್ರಹಿಸಿ ಒಳ್ಳೆಯ ಹೆಸರು ಮಾಡಿರುವವರನ್ನು ನೋಡಿದಾಗ ಶಿಕ್ಷಣ ಅಗತ್ಯವೇ ಎಂಬ ಅನುಮಾನ ಬರುತ್ತದೆ. ಆದರೆ ಗಳಿಸಿದ ಸಂಪತ್ತಿಗೆ ನಾವೇ ಕಾವಲುಗಾರರಾಗಬೇಕಾಗಿದ್ದು, ಯಾರೂ ಕದಿಯಲಾರದ ವಿದ್ಯೆ ಖಂಡಿತಾ ಅಗತ್ಯ. ಸರಿಯಾದ ಮಾರ್ಗದರ್ಶನ ಸಿಕ್ಕರೆ ವಿದ್ಯೆಯನ್ನೇ ಸಂಪತ್ತನ್ನಾಗಿ ರೂಪಿಸಿಕೊಳ್ಳಬಹುದು.

–ಧನಲಕ್ಷ್ಮಿ ಪುರುಷೋತ್ತಮರಾವ್, ಕೋಲಾರ




### ದ್ವಂದ್ವ

ಶಿಕ್ಷಣ– ಶಿಕ್ಷೆ, ಉದ್ಯೋಗ– ಯೋಗ: ಈ ದ್ವಂದ್ವಗಳ ನಡುವೆ ಒಂದೆಡೆ ನಲುಗುತ್ತಿದೆ, ಮತ್ತೊಂದೆಡೆ ನಲಿಯುತ್ತಿದೆ, ಸಮಾಜ! (ನೆಲೆ ತಪ್ಪದಿರಲಿ)

–ಸಿಪಿಕೆ, ಮೈಸೂರು

## ಆಳುವ ವರ್ಗಗಳಿಗೆ ಪಾಠ

ಲೇಖನ ಆಳುವ ವರ್ಗಗಳಿಗೆ ಪಾಠವಾಗಿದೆ. ಲೇಖಕರ ಚಿಂತನೆಗಳು ಅರ್ಥಪೂರ್ಣವಾಗಿವೆ. ಇಂದಿನ ಮಕ್ಕಳಿಗೆ ಶಾಲಾ ಹಂತದ ಚಟುವಟಿಕೆರಹಿತ ಬೋಧನೆ ಇಷ್ಟವಿಲ್ಲವಾಗಿದೆ.

–ಜಗದೀಶ ಬಿ. ಹೊಸೂರು, ಮೈಸೂರು



## ವೈವಿಧ್ಯಮಯ ವಿಚಾರ

‘ಬುದ್ಧನ ಶಾಂತಿಧಾಮ ಶ್ರೀಲಂಕಾದ ಕ್ಯಾಂಡಿ’ (ಡಿ. 04, ಡಾ. ನಾಗರಾಜು ಜಿ.ಬಿ. ಭೈರೇನಹಳ್ಳಿ) ಪ್ರವಾಸ ಕಥನ ತುಂಬಾ ಚೆನ್ನಾಗಿದೆ. ಪುಟ್ಟ ರಾಷ್ಟ್ರದ ವೈವಿಧ್ಯಮಯ ವಿಚಾರ ಅಚ್ಚರಿ ಎನಿಸಿತು.

–ಭಾರತೀ ಗಂಗಾಧರ್, ಬೆಂಗಳೂರು

## ಹೆಮ್ಮೆಯಾಯಿತು

‘ಡೆನ್ನ ಡೆನ್ನ ಡೆನ್ನಾನ’ (ಡಿ. 04, ಉಮಾ ಅನಂತ್) ‘ಚೆನ್ನುಡಿ’, ದಕ್ಷಿಣ ಕನ್ನಡ ಜಿಲ್ಲೆಯ ನುಡಿಸೊಬಗು, ಸಂಪ್ರದಾಯವನ್ನು ಪರಿಚಯಿಸಿದ ರೀತಿ ಚೆನ್ನಾಗಿತ್ತು. ಕರಾವಳಿಯಲ್ಲಿ ಹುಟ್ಟಿ ಉದ್ಯೋಗ ನಿಮಿತ್ತ ಊರು ಬಿಟ್ಟ ನನ್ನಂಥವರಿಗೆ ಹಳೆಯ ನೆನಪುಗಳನ್ನು ಮರುಕಳಿಸುವಂತೆ ಮಾಡಿದ್ದಲ್ಲದೆ ಹುಟ್ಟಿಬೆಳೆದ ತುಳುನಾಡಿನ ಬಗ್ಗೆ ಹೆಮ್ಮೆಪಡುವಂತೆ ಮಾಡಿತು. ಚಿಕ್ಕವನಾಗಿದ್ದಾಗ ನನ್ನ ತಾಯಿ ಹಾಡುತ್ತಿದ್ದ ಪಾಡ್ದನ, ತಂದೆ ಹಾಡುತ್ತಿದ್ದ ಯಕ್ಷಗಾನದ ಹಾಡುಗಳನ್ನು ನೆನೆದು ಕಣ್ಣು ತುಂಬಿ ಬಂತು.

–ಮಾಧವ ಉದ್ಯಾವರ, ಮೈಸೂರು

## ಆಪ್ಯಾಯಮಾನ ಸಂಗತಿ

ವೈವಿಧ್ಯಮಯ ಭಾಷೆ, ಸಂಸ್ಕೃತಿ, ಕಲೆಗಳ ತವರೂರಾಗಿರುವ ದಕ್ಷಿಣ ಕನ್ನಡ ಜಿಲ್ಲೆಯ ವೈಶಿಷ್ಟ್ಯವನ್ನು ಸ್ಥಳೀಯ ಭಾಷೆಯಲ್ಲೇ ಬಣ್ಣಿಸಿದ್ದು ಆಪ್ಯಾಯಮಾನವೆನಿಸಿತು. ಯಕ್ಷಗಾನ, ತಾಳಮದ್ದಳೆ, ಭೂತಕೋಲ, ಕಂಬಳದ ವರ್ಣನೆ ಮುದ ನೀಡಿತು. ನಾನಂತೂ ಅಲ್ಲಿನ ನನ್ನ ಬಾಲ್ಯದ ಮಧುರ ನೆನಪುಗಳಲ್ಲಿ ಕಳೆದುಹೋದೆ.

–ಸರಸ್ವತಿ ಶಂಕರ್, ಬೆಂಗಳೂರು

## ‘ಹಸಿರು ಕ್ರಾಂತಿ’ ನೆನಪಾಯಿತು

‘ತಂತ್ರಜ್ಞಾನದ ಮೆರುಗು ಕೃಷಿಯೊಳಗೆ ಬೆರಗು’ (ಡಿ. 04, ಶಶಿಕುಮಾರ್ ಸಿ.) ಲೇಖನ ಓದಿ ‘ಹಸಿರು ಕ್ರಾಂತಿ’ಯ ಯಶಸ್ಸು ನೆನಪಾಯಿತು. ಇದೀಗ ಕೃಷಿ ವಲಯದಲ್ಲಿ ಮತ್ತೊಂದು ಕ್ರಾಂತಿಯ ಅವಶ್ಯಕತೆಯನ್ನು ಲೇಖನ ಒತ್ತಿ ಹೇಳುವಂತಿದೆ.

–ಲಕ್ಷ್ಮಣ್ ಗೊರ್ಲಕಟ್ಟೆ, ಮೈಸೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in